ನನ್ನಿಂದ ಏನು ತಪ್ಪಾಗಿದೆ ಎಂದೇ ತಿಳಿದಿರಲಿಲ್ಲ. ಈಗ ಇದ್ದಕ್ಕಿದ್ದಹಾಗೆ ನಾನು ಬ್ಯಾಂಕಿನ ಮ್ಯಾನೇಜರಿಗೆ ಒಂದು ಕ್ಷಮಾಪಣ ಪತ್ರ ಬರೆಯಬೇಕು ಎಂದರೆ. ನನಗೆ ಅಪ್ಪನ ಮೇಲೆ ಇನ್ನಿಲ್ಲದ ಸಿಟ್ಟು ಬಂದಿತ್ತು. 'ನಾನು ಏನು ತಪ್ಪು ಮಾಡಿದ್ದೀನಿ' ಎಂದು ಕೇಳಿದಾಗ ಅವರು ನನ್ನಿಂದ ಆಗಿರಬಹುದಾದ ತಪ್ಪನ್ನು ಹೇಳಿದರು. ಅಷ್ಟೇ ಅಲ್ಲ 'ಕುಸು, ನಮ್ಮ ಹತ್ತಿರ ಹಣ ಇಲ್ಲಪ. ನೀನು ಕೊಂಚ ನಿನ್ನ ಆಸೆಗಳನ್ನು ಅದುಮಿಟ್ಟುಕೊಬೇಕು. ಹಾಗಿಲ್ಲದಿದ್ದಾಗ ಇಂತ ಎಡವಟ್ಟುಗಳು ಆಗುತ್ವೆ. ನೀವು ಹುಡುಗರು ಗೊತ್ತಾಗೊಲ್ಲ. ಆ ಅಕೌಂಟೆಂಟು ಭಾರಿ ಸ್ಟ್ರಿಕ್ಟು. ನಿನಗೆ ಮುಂದಿನ ತಿಂಗಳಿಂದಲೇ ಸಾಲ ನಿಲ್ಲಿಸಿಬಿಡುತ್ತಾನಂತೆ. ನಿನಗೆ ನಾ ಎಲ್ಲಿಂದ ದುಡ್ಡು ಕೊಡಲಿ.' ಎಂದು ಅಸಹಾಯಕತೆಯಿಂದ ಕೈಕೈ ಹಿಸುಕಿಕೊಂಡರು. ನಾನು ಇನ್ನಿಲ್ಲದಹಾಗೆ ವಿವರಣೆ ಕೊಟ್ಟರೂ ಅಪ್ಪನಿಗೆ ರಾಘವಾಚಾರಿ ಕಾರ್ಬನ್ ಕಾಪಿಯಲ್ಲಿ ನನ್ನ ಹೆಸರನ್ನು ಆತನ ಇಂಕ್ ಪೆನ್ನಿನಿಂದ ಬರೆದಿದ್ದು ಒಂದು ಸಣ್ಣ ಅಚಾತುರ್ಯದಿಂದ ಎಂದು ನಂಬಿಕೆ ಬರಲೇ ಇಲ್ಲ. ನನ್ನ ಸಾಚಾತನವನ್ನು ಪುರಾವೆ ಸಹಿತ ತೋರಿಸಲು ಆಫೀಸಿಗೆ ಕರಕೊಂಡು ಹೋದೆ. ರಾಘವಾಚಾರಿ ಎಂದೋ ತನ್ನ ತಪ್ಪನ್ನು ತಿದ್ದಿಕೊಂಡಾಗಿತ್ತು. ರಸೀತಿ ಪುಸ್ತಕದಲ್ಲಿ ಮೂಲ ಪ್ರತಿಯಲ್ಲಿ ನನ್ನ ಹೆಸರು ಬರೆದಿತ್ತು. ನಾನು ಅಸಹಾಯಕನಾಗಿ 'ಅಣ್ಣ, ನೀನೂ ನನ್ನ ನಂಬಲ್ಲ ಎಂದರೆ' ಎಂದು ಗೊಳೋ ಎಂದು ಅತ್ತುಬಿಟ್ಟೆ. ಆ ಅಳುವೂ ನನ್ನ ಮುಗ್ಧತೆಯನ್ನು ದೃಢೀಕರಿಸಲಿಲ್ಲ. ಬೇರೇನೂ ಮಾಡಲು ತೋಚದೇ ಒಂದು ಕ್ಷಮಾಪಣಾ ಪತ್ರ ಬರೆದು ಅಪ್ಪನ ಕೈಗೆ ಕೊಟ್ಟು 'ನನಗೆ ಕ್ಲಾಸಿದೆ' ಎಂದು ಅಪ್ಪನನ್ನು ಬಿಸಿಲಲ್ಲಿ ಕಾಲೇಜಿನ ಲೈಬ್ರರಿಯ ಮುಂದಿದ್ದ ಕಟ್ಟೆಯ ಮೇಲೆಯೇ ಬಿಟ್ಟು ಹಿಂದೆ ಕೂಡ ತಿರುಗದೇ ಹೊರಟುಬಿಟ್ಟೆ. ಕ್ಲಾಸ್‌ರೂಮಿನಿಂದ ನೋಡಿದಾಗ ಅಪ್ಪ ತಮ್ಮ ಚೀಲದಿಂದ ಒಂದು ನಶ್ಯದ ಕಲೆಯಿದ್ದ ಕರವಸ್ತ್ರದಿಂದ ಮುಖದ ಬೆವರನ್ನೆಲ್ಲಾ ಒರೆಸಿ ಅದನ್ನೇ ತಲೆಯ ಮೇಲೆ ಹಾಕಿಕೊಂಡು ನನ್ನ ಕ್ಷಮಾಪಣಾ ಪತ್ರವನ್ನು ಜೋಪಾನವಾಗಿ ಅವರ ಚೀಲದಲಿಟ್ಟುಕೊಂಡು ನಿಧಾನವಾಗಿ ಓಪಿಡಿ ಬಸ್ ಸ್ಟಾಪಿನ ಕಡೆ ಹೋಗುತ್ತಿದ್ದರು. ತಿರುತಿರುಗಿ ನಾನು ಕಾಣುತ್ತೀನಾ ಎಂದು ನೋಡುತ್ತಲೇ ಇದ್ದರು. ಆ ನೋಟದಲ್ಲಿ ಬಡತನದ ಅಸಹಾಯಕತೆ, ನನ್ನ ಮೇಲಿನ ಸಿಟ್ಟು, ಅಂತಃಕರಣ ಮತ್ತು ನನಗೆ ತೊಂದರೆಯಾಗಿಬಿಡುತ್ತದೇನೋ ಎಂಬ ಭಯ ಎಲ್ಲ ಒಟ್ಟುಗೂಡಿತ್ತು.

ಈ ಲೆಕ್ಕ ಬರೆಯುವ ನಮ್ಮಪ್ಪನ ಅಭ್ಯಾಸದಿಂದ ಎಷ್ಟೋ ತಮಾಷೆಯ ಪ್ರಸಂಗಗಳೂ ನಡೆದಿವೆ. ಒಮ್ಮೆ ನಾಗಮಂಗಲದಿಂದ ಅಪ್ಪನ ಸ್ನೇಹಿತ ವಾಸೂ ಮೇಷ್ಟರು ಬಂದಿದ್ದರು. ಮನೆಯ ಮುಂದೆ ಕೂತು ಮಾತನಾಡುತ್ತಿದ್ದಾಗ ಹೊರಗೆ ಯಾರೋ ಎಳನೀರು ಮಾರುವವನು ಬಂದ. ಅಪ್ಪ ಅವನನ್ನು ಕರೆದು 'ಎರಡು ಎಳನೀರು ಕೊಚ್ಚಿಕೊಡಪ್ಪ' ಎಂದು ಹೇಳಿ ಬಂದವರಿಗೂ ಎಳನೀರು ಕೊಡಿಸಿದ್ದಾರೆ. ವಾಸೂ ಮೇಷ್ಟರು ಕೊಂಚ ಕುಹಕಿ. 'ಆಹ ರಂಗನಾಥರಾಯರೇ, ನಿಮ್ಮ ಹತ್ತಿರ ಎಳನೀರು ಕೊಡಿಸಿಕೋಬೇಕು ಅಂದರೆ ನಾಗಮಂಗಲದಿಂದ ಬೆಂಗಳೂರಿನತನಕ ಬರಬೇಕು, ನೋಡಿ' ಎಂದಿದ್ದರು. ಅಪ್ಪ ತಕ್ಷಣ ಒಳಗೆ ಹೋಗಿ ನಾಲ್ಕಾರು ವರ್ಷದ ಲೆಕ್ಕದ ಪುಸ್ತಕಗಳನ್ನೆಲ್ಲ ತೆಗೆದು ಹುಡುಕಿ 'ವಿ' ಸೆಕ್ಷನಿನಲ್ಲಿ ವಾಸು ಮೇಷ್ಟರ ಹೆಸರಡಿಯಲ್ಲಿ ಬರೆದಿದ್ದ ಲೆಕ್ಕ ತೋರಿಸಿ 'ನೋಡ್ರೀ, ನಿಮಗ್ ನಾಲ್ಕು ವರ್ಷದ ಹಿಂದೆಯೂ ಎಳನೀರು ಕೊಡಿಸಿದ್ದೆ' ಎಂದರಂತೆ. ಅದರಲ್ಲಿ 'ವಾಸೂ ಮೇಷ್ಟ್ರಿಗೆ ರಾಮನವಮಿಯ ದಿನ ನರಸಿಂಹ ಭಟ್ಟರ ಅಂಗಡಿಯ ಮುಂದೆ ಕಾಡುಹರಟೆ ಹೊಡೆಯುತ್ತಾ ಕೂತಿದ್ದಾಗ ಕೊಡಿಸಿದ ಎಳನೀರಿನ ಬಾಬ್ತುಎರಡೂವರೆ ರೂಪಾಯಿ' ಎಂದು ಬರೆದು ಕೆಳಗೆ ಸಹಿ ಹಾಕಿದ್ದನ್ನು ತೋರಿಸಿದ್ದಾರೆ. ಅಷ್ಟೇ ಅಲ್ಲ, ಇಂದು ಎಳನೀರು ಕೊಡಿಸಿದ